ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE

**ಉಪ ಸಭಾಪತಿ ಸ್ಥಾನಕ್ಕೆ ಬಿಜೆಪಿಯ ಎಂ.ಕೆ.ಪ್ರಾಣೇಶ್ ಆಯ್ಕೆ ಇಂದು ನಾಮಪತ್ರ ಸಲ್ಲಿಕೆ**

# ಮೇಲ್ಮನೆ ಮೈತ್ರಿ ಜೆಡಿಎಸ್‌ಗೆ ಸಭಾಪತಿ ಖಾತ್ರಿ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ವಿಧಾನಪರಿಷತ್ ಸಭಾಪತಿ ಹುದ್ದೆಯನ್ನು ಜೆಡಿಎಸ್‌ಗೆ ಬಿಟ್ಟುಕೊಡಲು ತೀರ್ಮಾನಿಸಿದ ಬಿಜೆಪಿ, ಉಪ ಸಭಾಪತಿ ಹುದ್ದೆಗೆ ಚಿಕ್ಕಮಗಳೂರು ಜಿಲ್ಲೆಯ ಎಂ.ಕೆ. ಪ್ರಾಣೇಶ್ ಅವರನ್ನು ಆಯ್ಕೆ ಮಾಡಿದೆ.



ಸಿಎಂ ಯಡಿಯೂರಪ್ಪ ನೇತೃತ್ವದಲ್ಲಿ ನಡೆದ ಪರಿಷತ್ ಬಿಜೆಪಿ ಸದಸ್ಯರ ಸಭೆಯಲ್ಲಿ ಈ ಬಗ್ಗೆ ಸರ್ವಸಮ್ಮತದ ನಿರ್ಣಯ ತೆಗೆದುಕೊಳ್ಳಲಾಗಿದೆ. ಪರಿಷತ್‌ನಲ್ಲಿ ಬಿಜೆಪಿ ಸದಸ್ಯರ ಸಂಖ್ಯೆ 33 ಇದ್ದರೂ, ಬಹುಮತ ಸಾಧಿಸಲು ಇನ್ನೂ ಐವರು ಸದಸ್ಯರ ಕೊರತೆ ಇದೆ. ಆದ್ದರಿಂದ 13 ಸದಸ್ಯ ಬಲ ಹೊಂದಿರುವ ಜೆಡಿಎಸ್ ಬೆಂಬಲ ಪಡೆದುಕೊಳ್ಳುವುದು ಅನಿವಾರ್ಯ. ಈ ಹಿನ್ನೆಲೆಯಲ್ಲಿ ಜೆಡಿಎಸ್ ಜತೆ ಕೊಡುಕೊಳ್ಳುವಿಕೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಜ.29ರಂದು ಉಪ ಸಭಾಪತಿ ಹುದ್ದೆಗೆ ಚುನಾವಣೆ ನಡೆಯಲಿದೆ.

**ಸಭಾಪತಿ ಹುದ್ದೆಗೆ ಪಟ್ಟು:** ಸಂಖ್ಯಾಬಲ ಆಧಾರದಲ್ಲಿ ಬಿಜೆಪಿಗೆ ಸಭಾಪತಿ ಹುದ್ದೆ ಬಿಟ್ಟುಕೊಂಡುವಂತೆ ಜೆಡಿಎಸ್ ಮನವೊಲಿಸಲು ಕೆಲ ಸದಸ್ಯರು ಸಭೆಯಲ್ಲಿ ಸಿಎಂಗೆ ಸಲಹೆ ನೀಡಿದರು. ಇನ್ನು ಕೆಲ ಸದಸ್ಯರು, ಎರಡೂ ಹುದ್ದೆಗಳು ಬಿಜೆಪಿ ಪಾಲಿಗೆ ಇರಲಿ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದರು. ಈ ವೇಳೆ ಮಾತನಾಡಿದ ಸಿಎಂ ಮೇಲ್ಮನೆಯಲ್ಲಿ ನಮಗೆ ಬಹುಮತವಿಲ್ಲದ ಕಾರಣ ಜೆಡಿಎಸ್ ಬೆಂಬಲ ಅನಿವಾರ್ಯ. ಆದ್ದರಿಂದ ಸೌಜನ್ಯದಿಂದ ಅವರಿಗೆ ಸಭಾಪತಿ ಹುದ್ದೆ ಬಿಟ್ಟುಕೊಟ್ಟು, ಮುಂದೆ ಬಹುಮತ ಬಂದಾಗ ಸಭಾಪತಿ ಹುದ್ದೆ ಪಡೆಯುವ ವಿಚಾರ ಮಾಡೋಣ ಎಂದು ಮನವರಿಕೆ ಮಾಡಿಕೊಟ್ಟರು.

ಸಭೆಯಲ್ಲಿ ಉಪಸಭಾಪತಿ ಹುದ್ದೆಗೆ ಚಿಕ್ಕಮಗಳೂರಿನ ಎಂ.ಕೆ.ಪ್ರಾಣೇಶ್ ಹೆಸರನ್ನು ಸಿಎಂ ಪ್ರಸ್ತಾಪಿಸಿದರು. ಅದಕ್ಕೆ ಪರಿಷತ್ ಸದಸ್ಯರು ಸಹಮತ ವ್ಯಕ್ತಪಡಿಸಿದ್ದು, ಗುರುವಾರ ಅವರು ನಾಮಪತ್ರ ಸಲ್ಲಿಸಲಿದ್ದಾರೆ. ಸಭೆಯಲ್ಲಿ ಡಿಸಿಎಂ ಗೋವಿಂದ ಕಾರಜೋಳ, ಡಾ.ಸಿ.ಎನ್.ಅಶ್ವತ್ಥನಾರಾಯಣ, ಸಚಿವರಾದ ಜೆ.ಸಿ.ಮಾಧುಸ್ವಾಮಿ, ಆರ್.ಅಶೋಕ್, ಉಮೇಶ್ ಕತ್ತಿ ಸೇರಿ ಹಲವರು ಹಾಜರಿದ್ದರು.

**ಅಸಮಾಧಾನ:** ಉಪ ಸಭಾಪತಿ ಹುದ್ದೆ ಮೇಲೆ ಶಶಿಲ್ ನಮೋಶಿ, ಅರುಣ್ ಶಹಾಪೂರ, ಮಹಾಂತೇಶ ಕವಟಗಿಮಠ ಸೇರಿ ಹಲವರು ಕಣ್ಣಿಟ್ಟಿದ್ದರು. ರೇಸ್‌ನಲ್ಲಿಲ್ಲದ ಹೆಸರು ಆಯ್ಕೆಯಾದ ಬಗ್ಗೆ ಕೆಲವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಪಕ್ಷ ನನ್ನನ್ನು ಉಪ ಸಭಾಪತಿ ಸ್ಥಾನಕ್ಕೆ ಆಯ್ಕೆ ಮಾಡಿದೆ. ನನ್ನ ಆಯ್ಕೆಗೆ ಕಾರಣರಾದ ಎಲ್ಲರಿಗೂ ಧನ್ಯವಾದಗಳು. ಸಿಕ್ಕಿರುವ ಅವಕಾಶವನ್ನು ಉತ್ತಮವಾಗಿ ಬಳಸಿಕೊಳ್ಳುತ್ತೇನೆ.

| ಎಂ.ಕೆ. ಪ್ರಾಣೇಶ್

## ಎಂ.ಕೆ.ಪ್ರಾಣೇಶ್ ಆಯ್ಕೆ ಏಕೆ?

ಪರಿಷತ್ ಉಪಸಭಾಪತಿಯಾಗಿದ್ದ ಧರ್ಮೇಗೌಡ ಆತ್ಮಹತ್ಯೆಯಿಂದ ತೆರವಾದ ಸ್ಥಾನವನ್ನು ಅದೇ ಜಿಲ್ಲೆಗೆ ಬಿಟ್ಟುಕೊಡಲು ಒಲವು ತೋರಿಸಿದ್ದರ ಹಿಂದೆ ಹತ್ತು ಹಲವು ಲೆಕ್ಕಾಚಾರಗಳಿವೆ. ಸಿ.ಟಿ.ರವಿ ರಾಜೀನಾಮೆ ನೀಡಿದ ಬಳಿಕ ಚಿಕ್ಕಮಗಳೂರು ಜಿಲ್ಲೆಗೆ ಸಚಿವ ಸ್ಥಾನ ಸಿಕ್ಕಿಲ್ಲ ಎನ್ನುವ ಕೊರತೆ ನೀಗಿಸುವ ಲೆಕ್ಕಾಚಾರ ಆಯ್ಕೆ ಹಿಂದಿದೆ. ಮತ್ತೊಂದೆಡೆ ಒಕ್ಕಲಿಗ ಸಮುದಾಯಕ್ಕೆ ಆದ್ಯತೆ ನೀಡಿದಂತಾಗುತ್ತದೆ. ಜತೆಗೆ ಸಿ.ಟಿ.ರವಿ ಮಾತಿಗೆ ಮಣೆ ಹಾಕಿದಂತಾಗುತ್ತದೆ ಎನ್ನುವ ತಂತ್ರಗಾರಿಕೆಯೂ ಇದೆ. ಒಮ್ಮೆ ಜಿಪಂ ಸದಸ್ಯರಾಗಿದ್ದ ಎಂ.ಕೆ.ಪ್ರಾಣೇಶ್, ಪರಿಷತ್‌ಗೆ ಮೊದಲ ಬಾರಿಗೆ ಆಯ್ಕೆ ಆಗಿದ್ದಾರೆ.